ಆದರೆ ಬೇರೆ ರಾಜ್ಯಕ್ಕೆ ಕಂಪೇರ್ ಮಾಡಿದರೆ ನಮ್ಮ ರಾಜ್ಯದಲ್ಲಿ ಒಳ್ಳೆಯ ಕೆಲಸ ಮಾಡಿದೆ ಎಂದು ಕೇಂದ್ರ ಸರ್ಕಾರದಿಂದ ಬಂದ ನಿಯೋಗ ಕೊಡ ಹೇಳಿ ನಮಗೆ ಶಹಬಾಷ್‌ಗಿರಿಯನ್ನು ಕೊಟ್ಟಿದೆ. ಪ್ರಾಯಶಃ ಮುಂದೆ ನೀವು ಹೇಳಿದ ಸಲಹೆಗಳನ್ನು ಹೆಚ್1 ಎನ್1 ಆಗಿರಬಹುದು, ಡೆಂಗ್ಯೂ ಜ್ವರ ಅಥವಾ ಚಿಕೂನ್ ಗುನ್ಯಾ ಆಗಿರಬಹುದು. ಮುಂದೆ ಈ ರೀತಿಯ ಕಾಯಿಲೆಗಳು ಬರದಂತೆ ಮುಂಜಾಗ್ರತೆಯ ಕ್ರಮ ತೆಗೆದುಕೊಳ್ಳಬೇಕೆಂದು ನೀವು ಏನು ಸಲಹೆಗಳನ್ನು ಕೊಟ್ಟಿರುತ್ತೀರಿ ಖಂಡಿತವಾಗಿ ತಮ್ಮ ಸಲಹೆಗಳನ್ನು ಒಪ್ಪಿ ಮುಂದಿನ ದಿನಮಾನಗಳಲ್ಲಿ ಯಾವ ರೀತಿಯಲ್ಲಿ ಈ ಕಾಯಿಲೆ ಬರದಂತೆ ನೋಡಿಕೊಳ್ಳುತ್ತೇನೆಂದು ನಾನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಮಾತನ್ನು ಕೊಡುತ್ತೇನೆ.

ಆ) ವಿಷಯ: ರಾಜ್ಯದಲ್ಲಿ ಬಲಿಜ ಜನಾಂಗವನ್ನು ಪ್ರವರ್ಗ–3ಎ ಇಂದ ಪ್ರವರ್ಗ–2ಎ ಗೆ ಸೇರಿಸುವುದರ ಬಗ್ಗೆ .

ಶ್ರೀ ಎನ್. ಸಂಪಂಗಿ: ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಬಲಿಜ ಜನಾಂಗಕ್ಕೆ ಸೇರಿದ ಸಮುದಾಯದ ಸಾಕಷ್ಟು ಜನರು ಹೂವು, ಬಳೆ ಕುಂಕುಮ ಮಾರಾಟ ಮಾಡಿ ಜೀವನ ಸಾಗಿಸುತ್ತಿದ್ದಾರೆ. ಇವರುಗಳು ಆರ್ಥಿಕವಾಗಿ ಬಹಳ ಹಿಂದುಳಿದಿದ್ದು, ವಿದ್ಯಾಭ್ಯಾಸದಲ್ಲೂ ಕೂಡ ಬಹಳ ಹಿಂದಿರುವುದರಿಂದ ಬಲಿಜ ಜನಾಂಗವನ್ನು ಪ್ರವರ್ಗ–3ಎ ದಿಂದ 2ಎ ಗೆ ಸೇರಿಸುವುದರ ಬಗ್ಗೆ ಮಾನ್ಯ ಸಮಾಜ ಕಲ್ಯಾಣ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಡಿ.ಸುಧಾಕರ್ (ಸಮಾಜ ಕಲ್ಯಾನ ಸಚಿವರು): ಮಾನ್ಯ ಆದ್ಯಕ್ಷರೆ,

ಪ್ರಸ್ತುತ ಸದರಿ ಬಲಿಜ ಜನಾಂಗವು ದಿನಾಂಕ 30–03–2002ರ ಜಾತಿಪಟ್ಟಿಯಲ್ಲಿ ಪ್ರವರ್ಗ–IIIಎ ಕ್ರಮ ಸಂಖ್ಯೆ 3(ಎ) ರಲ್ಲಿ ಇರುತ್ತದೆ.

'ಬಲಿಜ' ಜನಾಂಗವನ್ನು ಪ್ರಸ್ತುತ ಜಾರಿಯಲ್ಲಿರುವ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿನ ಪ್ರವರ್ಗ– IIIಎ ಯಿಂದ ಪ್ರವರ್ಗ– IIಎ ಗೆ ವರ್ಗಾಯಿಸಲು ಸದರಿ ಜನಾಂಗದವರು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗಕ್ಕೆ ಮನವಿ ಸಲ್ಲಿಸಿದ್ದು, ಈ ವಿಷಯವು ಆಯೋಗದ ಪರಿಶೀಲನೆಯಲ್ಲಿರುತ್ತದೆ. ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧಿನಿಯಮ 1995ರ ಅಡಿಯಲ್ಲಿ ಪ್ರವರ್ಗ ಬದಲಾವಣೆ, ಹೊಸ ಸೇರ್ಪಡೆ, ಕಾಗುಣಿತ ದೋಷ ಮುಂತಾದವುಗಳನ್ನು ಕುರಿತು ಆಯೋಗವು ಪರಿಶೀಲಿಸಿ ಸರ್ಕಾರಕ್ಕೆ ತನ್ನ ಸಲಹೆಗಳನ್ನು ನೀಡುತ್ತಿದೆ. ಆದುದರಿಂದ 'ಬಲಿಜ' ಜನಾಂಗವನ್ನು ಪ್ರವರ್ಗ– IIIಎ ಯಿಂದ ಪ್ರವರ್ಗ– IIಎ ಗೆ ವರ್ಗಾಯಿಸುವ ಕುರಿತಂತೆ ಆಯೋಗವು ಪರಿಶೀಲಿಸಿ ನೀಡುವ ಶಿಫಾರಸ್ಸನ್ನು ಆಧರಿಸಿ ಮುಂದಿನ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಎನ್. ಸಂಪಂಗಿ : ಮಾನ್ಯ ಅಧ್ಯಕ್ಷರೆ, ಅವರು ಹೇಳುವುದು ಹಿಂದುಳಿದ ವರ್ಗದ ಆಯೋಗ ಮುಂದೆ ಮಾಡುತ್ತದೆ. ಖಂಡಿತವಾಗಿ ಆಯೋಗದ ಪ್ರಶ್ನೆ ಇಲ್ಲಿ ಬಂದಿರುವುದಿಲ್ಲ. ಏಕೆಂದರೆ 1994 ರ ಜುಲೈನಲ್ಲಿ ಸಚಿವ ಸಂಪುಟ ತೀರ್ಮಾನ ತೆಗೆದುಕೊಂಡು ಏಕಾಏಕಿಯಾಗಿ ಈ ಬಲಿಜ ಜನಾಂಗವನ್ನು ಮಾತ್ರ ತೆಗೆದು ಹಾಕಿತು. ಅವತ್ತು ನಮಗೆ 20% ಮೀಸಲಾತಿ ಸಿಗುತ್ತಿತ್ತು. ಆ ಮೀಸಲಾತಿ ಸಿಕ್ಕಿದಾಗ ಹಿಂದೆ 2ಎ ಒಳಗಡೆ ಇತ್ತು. ದೇವಾಂಗ, ವಿಶ್ವಕರ್ಮ, ಕುರುಬ, ಈಡಿಗ ಮುಂತಾದ ಜಾತಿಗಳೊಂದಿಗೆ ಸ್ಪರ್ಧಿಸುವ ಮೂಲಕ ಸಾಮಾಜಿಕವಾಗಿ ನ್ಯಾಯ ಸಿಗುತ್ತಿತ್ತು. ಜುಲೈ ನಂತರ ಕ್ಯಾಬಿನೆಟ್ ಕಿತ್ತು ಹಾಕಿದ ನಂತರ 4% ಗೆ ಬಂದು ಬಿಟ್ಟಿತು. ನಂತರ ಬಲಿಷ್ಠ ಜಾತಿಗಳಾದ ಒಕ್ಕಲಿಗ ಜಾತಿಯೊಂದಿಗೆ ಸೇರಿಸಿ ಬಿಟ್ಟಿರುವುದರಿಂದ ಸ್ಪರ್ಧೆ ಮಾಡುವ

ಪರಿಸ್ಥಿತಿ ಬಂದು ಬಿಟ್ಟಿತು. ಈ ಬಲಿಜ ಜನಾಂಗ ಬಹಳ ಹಿಂದುಳಿದಿರುವಂಥದ್ದು. ಇವರು ಕುಂಕುಮ ಮಾರಿಕೊಂಡು ಅಥವಾ ಬಳೆ ಮಾರಿಕೊಂಡು ಹಳ್ಳಿಗಳ ಗುಡ್ಡಗಾಡು ಪ್ರದೇಶಗಳಲ್ಲಿ ಇವತ್ತು ವಾಸ ಮಾಡುತ್ತಿದ್ದಾರೆ. ಆರ್ಥಿಕವಾಗಿ ಸಮಾಜಿಕವಾಗಿ ಇವರಿಗೆ ಯಾವ ರೀತಿಯ ಒಂದು ಪ್ರೋತ್ಸಾಹ ಇರುವುದಿಲ್ಲ. ಇವರು ಬಹಳ ಬಡತನದಲ್ಲಿರತಕ್ಕಂಥವರಾಗಿದ್ದಾರೆ.

ಅಧ್ಯಕ್ಷರು: ನೀವು ಕ್ಲಾರಿಪಿಕೇಶನ್ ಕೇಳುವುದು ಬಿಟ್ಟು ಅವರ ಜೀವನ ಪರಿಸ್ಥಿತಿಯನ್ನು ಹೇಳಿಕೊಂಡು ಹೋದರೆ ಹೇಗೆ? ನೀವು ಸ್ಪಷ್ಟವಾಗಿ ಏನು ಆಗಬೇಕು ಅದನ್ನು ಕೇಳಿ.

ಶ್ರೀ ಎನ್. ಸಂಪಂಗಿ: ಮಾನ್ಯ ಅಧ್ಯಕ್ಷರೆ, ಅವರಿಗೆ ಸರ್ಕಾರ ಕೆಲಸ ಸಿಗುವುದರಲ್ಲಿ ತೊಂದರೆ ಆಗುತ್ತಿದೆ. ಆದ ತಕ್ಷಣ ನೀವು ಆಯೋಗವನ್ನು ಕಾಯುವುದಕ್ಕೆ ಹೋಗಬೇಡಿ. ಹಿಂದುಳಿದ ವರ್ಗದ ಆಯೋಗದ ವರದಿ ಬರುವವರೆಗೆ ನಾವು ಕಾಯುವುದಕ್ಕೆ ಸಾಧ್ಯವಿಲ್ಲ. ಆದಷ್ಟು ಬೇಗನೆ ಸರ್ಕಾರ ತೀರ್ಮಾನ ತೆಗೆದುಕೊಂಡು ಪ್ರವರ್ಗ-2ಎ ಗೆ ಸೇರಿಸಬೇಕೇಂದು ನಾನು ತಮ್ಮಲ್ಲಿ ವಿನಂತಿಸಿಕೊಳ್ಳುತ್ತಿದ್ದೇನೆ.

ಶ್ರೀ ಡಿ. ಸುಧಾಕರ್ : ಮಾನ್ಯ ಅಧ್ಯಕ್ಷರೆ, ಈ ಬಲಿಜ ಜನಾಂಗವನ್ನು 3ಎ ರಿಂದ 2ಎ ಗೆ ಸೇರಿಸುವುದು ಅಥವಾ 2ಎಗೆ ಬದಲಾವಣೆ ಮಾಡುವುದು ಇದ್ದರೂ ಸರ್ಕಾರವು ಸಂಪೂರ್ಣವಾಗಿ ಆಯೋಗದ ಶಿಫಾರಸ್ಸಿನ ಮೇಲೆ ಮಾತ್ರ ಮಾಡುತ್ತಿದ್ದೇವೆ. ಅದರ ಬಗ್ಗೆ ಸರ್ಕಾರ ಏಕಾಏಕಿ ನಿರ್ಧಾರ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಅದನ್ನು ಆಯೋಗದವರು ಪರಿಶೀಲನೆ ಮಾಡಿ ಶಿಫಾರಸ್ಸು ಮಾಡಿದರೆ ಖಂಡಿತವಾಗಿ ನಾವು ಪರಿಗಣಿಸುವುದಕ್ಕೆ ಬದ್ಧರಾಗಿರುತ್ತೇವೆ.